ಕಂಪನಿಯ ವತಿಯಿಂದಲೇ ಖರೀದಿಸುವಂತೆ ದಿನಾಂಕ 22-7-97ರ ಸುತ್ತೋಲೆಯಲ್ಲಿ ಆಗ್ರಹಪೂರ್ವಕ ವಾಗಿ ಒತ್ತಾಯಿಸಲಾಗಿದೆ.

ಶ್ರೀ ರಾಮಲಿಂಗಾರೆಡ್ಡಿ : ಮಾನ್ಯ ಅಧ್ಯಕ್ಷರೆ, ಮೈಸೂರಿನಲ್ಲಿ ಇರತಕ್ಕಂಥ ಈ ಬಣ್ಣದ ಕಾರ್ಖಾನೆ, ಇದು ಸರ್ಕಾರಿ ಕಾರ್ಖಾನೆ, ಇದು ಲಾಸ್‌ನಲ್ಲಿ ನಡೆಯುತ್ತಿದೆ. ನಮ್ಮ ಸರ್ಕಾರದ ಆದೇಶದಂತೆ ನಮ್ಮ ಎಲ್ಲಾ ಇಲಾಖೆಗಳು ಮತ್ತ ಸರ್ಕಾರಿ ಸಾಮ್ಯದ ಎಲ್ಲಾ ಬೇರೆ ಬೇರೆ ಪಬ್ಲಿಕ್ ಸೆಕ್ಟರ್ಸ್ ಎಲ್ಲಾ ಇಲ್ಲಿಂದಲೇ ಬಣ್ಣ ತೆಗೆದುಕೊಳ್ಳಬೇಕು ಎಂಬ ಆದೇಶವನ್ನು ಮಾಡಿದ್ದೀರಿ, ಹಿಂದೆ ನಾನು ಈ ಇಲಾಖೆಯ ಮಂತ್ರಿಯಾಗಿದ್ದಾಗ ನಾನು ಕೂಡ ಒತ್ತಾಯ ಮಾಡಿದ್ದೆ. ಆದರೆ ನೆನ್ನ ಒಂದು ಪ್ರಶ್ನೆಯಲ್ಲಿ ಈ ಆದೇಶದ ಪಾಲನೆ ಸರಿಯಾಗಿ ಆಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಅಂದರೆ ಹೌದು ಎಂದು ಉತ್ತರವನ್ನು ಕೊಟ್ಟಿದ್ದಾರೆ. ಏಕೆ ಬಣ್ಣವನ್ನು ತೆಗೆದುಕೊಳ್ಳುತ್ತಿಲ್ಲ ಸನ್ಮಾನ್ಯ ಸಚಿವರೇ? ನಮ್ಮ ಬಣ್ಣದ ಕಾರ್ಖಾನೆಯಲ್ಲಿ ಇರತಕ್ಕ ಪೇಂಟ್ ಒಳ್ಳೆಯ ಕ್ವಾಲಿಟಿ ಪೇಂಟ್. ಮತ್ತು ನಮ್ಮ ಸರ್ಕಾರದಲ್ಲಿರತಕ್ಕ ಎಲ್ಲಾ ಇಲಾಖೆಗಳು ಅಲ್ಲೇ ತೆಗೆದುಕೊಳ್ಳಬೇಕು ಎಂಬ ಒಂದು ಸರ್ಕಾರದ ಆದೇಶ ಕೂಡ ಇದೆ. ಈ ರೀತಿ ಆದೇಶ ಇದ್ದರೂ ಕೂಡ ಅದನ್ನು ಸರಿಯಾಗಿ ಪಾಲಿಸುತ್ತಿಲ್ಲ.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೆ, ನಾನು ಪ್ರಾಮಾಣಿಕವಾಗಿ ಒಪ್ಪಿಕೊಳ್ಳುತ್ತೇನೆ. ಆದೇಶವನ್ನು ಕೊಟ್ಟಿದ್ದೇವೆ. ಈ ಪಬ್ಲಿಕ್ ಸೆಕ್ಟರ್ಸ್ ಇರಬಹುದು, ಜಿಲ್ಲಾಪಂಚಾಯತ್ ಇರಬಹುದು. ಪಿಡಬ್ಲ್ಯೂಡಿ ಇರಬಹುದು, ಎಲ್ಲೆಲ್ಲಿ ಈ ಬಣ್ಣ ಬೇಕಾಗುತ್ತದೆ, ಅದನ್ನು ಇಲ್ಲಿಂದಲೇ ತೆಗೆದುಕೊಳ್ಳಬೇಕು ಎಂದು ನಾವು ಆದೇಶವನ್ನು ಕೊಟ್ಟಿದ್ದೇವೆ. ಆದೇಶಕ್ಕೆ ಬಹಳ ಜನ ಸಹಕಾರ ಕೊಡುತ್ತಿದ್ದಾರೆ. ಜಿಲ್ಲಾ ಪಂಚಾಯತ್‌ಗಳವರು ಇಲ್ಲಿಂದ ತೆಗೆದುಕೊಳ್ಳುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಮತ್ತು ಕೆ.ಎಸ್.ಆರ್.ಟಿ.ಸಿ. ಯವರು 80ಪರ್ಸೆಂಟ್ ತೆಗೆದುಕೊಳ್ಳುತ್ತಿದ್ದಾರೆ. ಈ ಆದೇಶವನ್ನು ಇನ್ನು ಸರಿಯಾಗಿ ಜಾರಿಗೆ ತರಬೇಕು ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಪುನಃ 22-7-97ರಂದು ಸುತ್ತೋಲೆ ಮುಖಾಂತರ ತಿಳಿಸಿದ್ದೇವೆ. ಎಲ್ಲಾ ಪಬ್ಲಿಕ್ ಅಂಡರ್‌ಟೇಕಿಂಗ್ಸ್, ಸರ್ಕಾರಿ ಇಲಾಖೆಗಳು, ಮೈಸೂರು ಪೇಂಟ್ಸ್‌ರವರಿಂದಲೇ ಬಣ್ಣ ಖರೀದಿಸಬೇಕೆಂದು ಆದೇಶ ಕಳುಹಿಸಿದ್ದೇವೆ. ಇದನ್ನು ಸರಿಯಾಗಿ ಜಾರಿಗೆ ತರಲಿಕ್ಕೆ ಪ್ರಯತ್ನ ಮಾಡುತ್ತಿದೆ.

ಶ್ರೀ ರಾಮಲಿಂಗಾರೆಡ್ಡಿ : ಸರ್ಕಾರದ ಆದೇಶ ಆಂದ ಮೇಲೆ ಅದನ್ನು ಸರಿಯಾಗಿ ಕಡ್ಡಾಯವಾಗಿ ಪಾಲಿಸಬೇಕು ತಾನೇ? ಏಕೆ ಪಾಲಿಸುತ್ತಿಲ್ಲ, ಪಾಲಿಸದೇ ಇದ್ದವರ ಮೇಲೆ ಕ್ರಮ ಕೈಗೊಳ್ಳಬೇಕು ತಾನೇ?

ಶ್ರೀ ಆರ್. ವಿ. ದೇಶಪಾಂಡೆ : ಒಂದು ಸಲ ಅವರಿಗೆ ಅವಕಾಶವನ್ನು ಕೊಟ್ಟು ನಂತರವು ಅವರು ಈ ಆದೇಶವನ್ನು ಪಾಲಿಸಲಿಲ್ಲ ಎಂದರೆ ಅವರ ಮೇಲೆ ಖಂಡಿತ ಕ್ರಮ ಕೈಗೊಳ್ಳುತ್ತೇನೆ.

ಮಾಗಡಿ ಪಟ್ಟಣದ ಪುರಸಭೆಗೆ ಹೊಸ ಕಛೇರಿ ಕಟ್ಟಡ

558 - ಶ್ರೀ ಹೆಚ್. ಸಿ. ಬಾಲಕೃಷ್ಣ (ಮಾಗಡಿ) : ಮಾನ್ಯ ಪೌರಾಡಳಿತ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) *ಮಾಗಡಿ ಪುರಸಭೆಯ ಕಛೇರಿಯ ಕಟ್ಟಡ ಅತ್ಯಂತ ಶಿಥಿಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

2) *ಇದರಿಂದ ಸಾರ್ವಜನಿಕರಿಗೆ ಪುರಸಭಾ ನೌಕರರಿಗೆ ತೊಂದರೆಯಾಗಿರುವುದು ನಿಜವಲ್ಲವೇ?*

3) *ಈ ಕಟ್ಟಡ ಹೊಸದಾಗಿ ಕಟ್ಟಲು ಸರ್ಕಾರವು ಪರಿಶೀಲಿಸುತ್ತದೆಯೇ, ಕಟ್ಟಡದ ಅಂದಾಜು ವೆಚ್ಚ ಎಷ್ಟು? ಈ ಕಟ್ಟಡದ ಕಾಮಗಾರಿಯನ್ನು ಯಾವಾಗ ಆರಂಭಿಸಲಾಗುವುದು.*

ಶ್ರೀ ಮೀರಾಜುದ್ದೀನ್ ಎನ್. ಪಟೇಲ್ (ಪೌರಾಡಳಿತ ರಾಜ್ಯ ಸಚಿವರು) :

1) ಬಂದಿದೆ.

2) ಹೌದು.

3) ಹೊಸ ಕಟ್ಟಡವನ್ನು ಕಟ್ಟಲು ಆಗಬಹುದಾದ ಅಂದಾಜು ವೆಚ್ಚ ರೂ. 15.00 ಲಕ್ಷಗಳು, ಸದರಿ ಕಟ್ಟಡ ಕಟ್ಟುವ ಪ್ರಸ್ತಾವನೆ ಸರ್ಕಾರದ ಮುಂದಿಲ್ಲ.

ಶ್ರೀ ಹೆಚ್. ಸಿ. ಬಾಲಕೃಷ್ಣ : ಸನ್ಮಾನ್ಯ ಅಧ್ಯಕ್ಷರೆ, ಈ ಮಾಗಡಿ ಪುರಸಭೆಯ ಕಛೇರಿಯ ಕಟ್ಟಡ ಅತ್ಯಂತ ಶಿಥಿಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದರೆ ಬಂದಿದೆ ಎಂಬ ಉತ್ತರವನ್ನು ಕೊಟ್ಟಿದ್ದಾರೆ, ಇದರಿಂದ ಸಾರ್ವಜನಿಕರಿಗೆ ಪುರಸಭಾನೌಕರರಿಗೆ ತೊಂದರೆಯಾಗಿರುವುದು ನಿಜವೇ ಎಂದರೆ ಹೌದು ಎಂದು ಉತ್ತರ ಕೊಟ್ಟಿದ್ದಾರೆ, ಆದರೆ ಈ ಕಟ್ಟಡ ಕಟ್ಟುವುದಕ್ಕೆ ಸರ್ಕಾರ ಏನಾದರೂ ಕ್ರಮ ಕೈಗೊಂಡಿದೆಯೇ ಅಂದರೆ ಪ್ರಸ್ತಾವನೆ ಸರ್ಕಾರದ ಮುಂದೆ ಇಲ್ಲ ಎಂದು ಹೇಳುತ್ತಾರೆ. ಸನ್ಮಾನ್ಯ ಅಧ್ಯಕ್ಷರೆ, ತಮ್ಮ ಮೂಲಕ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ, ಮಾನ್ಯ ಮಂತ್ರಿಗಳು ಈ ವರ್ಷವೇನಾದರೂ ಕಟ್ಟಡ ಕಟ್ಟಲಿಕ್ಕೆ ಹಣವನ್ನು ಮಂಜೂರು ಮಾಡುತ್ತಾರಾ? ಏಕೆಂದರೆ ಈಗಾಗಲೇ ಅದು ಬಿದ್ದು ಹೋಗುವ ಸ್ಥಿತಿಯಲ್ಲಿದೆ. ಅದರ ಒಳಗಡೆ ಮೀಟಿಂಗ್ ಮಾಡಲಿಕ್ಕೂ ಕಷ್ಟ ಆಗುತ್ತಿದೆ, ಮತ್ತು ಬಹಳ ತೊಂದರೆ ಆಗಿದೆ. ತಾವು ದಯಮಾಡಿ, ಈ ವರ್ಷವೇ ಕಟ್ಟಡ ಕಟ್ಟಲಿಕ್ಕೆ ಪ್ರಾರಂಭ ಮಾಡಲಿಕ್ಕೆ ಸರ್ಕಾರದ ವತಿಯಿಂದ ಸಹಕಾರ ಕೊಡುತ್ತೀರಾ ಎಂದು ತಮ್ಮ ಮುಖಾಂತರ ಕೇಳಲಿಕ್ಕೆ ಇಚ್ಛಿಪಡುತ್ತೇನೆ.

ಶ್ರೀ ಮೀರಾಜುದ್ದೀನ್ ಎನ್. ಪಟೇಲ್ : ಮಾನ್ಯ ಅಧ್ಯಕ್ಷರೇ, ಡೆಪ್ಯುಟಿ ಕಮೀಷನರ್, ಬೆಂಗಳೂರು ರೂರಲ್, ಇವರ ರಿಲೀಫ್ ಫಂಡಿನಿಂದ ಅದನ್ನು ದುರಸ್ತಿ ಮಾಡಲು 1,60,000 ರೂಪಾಯಿ ಕೊಟ್ಟಿದ್ದೇವೆ. ಅದರ ಎಸ್ಟಿಮೇಟೆಡ್ ಕಾಸ್ಟ್ ಸುಮಾರು 15 ಲಕ್ಷ ರೂಪಾಯಿಗಳು ಆಗುತ್ತದೆ. ಸರ್ಕಾರದಿಂದ ನಾವು ಯಾವ ಯಾವ ಹಣ ಕೊಡುವುದಿದೆ, ಅದನ್ನು ನಾವು ಸರಿಯಾಗಿ ಕೊಡುತ್ತಿದ್ದೇವೆ. ಇದಕ್ಕೆ ಸೆಪರೇಟ್‌ಆಗಿ ಬಿಲ್ಡಿಂಗ್ ಕನ್‌ಸ್ಟ್ರಕ್ಷನ್ ಮಾಡುವ ಸಲುವಾಗಿ ಸರ್ಕಾರದಿಂದ ಯಾವುದೇ ಫಂಡ್ ಇಲ್ಲ. ಸರ್ಕಾರದಿಂದ ಅದನ್ನು ಕೊಡಲು ಬರುವುದಿಲ್ಲ.

ಶ್ರೀ ಹೆಚ್. ಸಿ. ಬಾಲಕೃಷ್ಣ : ಫಂಡ್ ಇಲ್ಲ ಎಂದರೆ ಕಟ್ಟಡ ಬಿದ್ದುಹೋಗುತ್ತದೆ. ಅಲ್ಲಿರತಕ್ಕಂಥ ರೆವಿನ್ಯೂ ಬರೀ ಸಂಬಳ ಕೊಡುವುದಕ್ಕಾಗುತ್ತದೆ. ಮತ್ತೆ ಅಲ್ಲಿ ನೌಕರರು ಕೆಲಸ ಹೇಗೆ ಮಾಡುತ್ತಾರೆ? ದಯಮಾಡಿ ತಮ್ಮ ಮುಖಾಂತರ ನಾನು ಮಂತ್ರಿಗಳನ್ನು ಕೇಳುತ್ತೇನೆ, ಯಾವುದಾದರೂ ಹಣವನ್ನು ಹೊಂದಿಸಿಕೊಂಡು, ದಯಮಾಡಿ ಈ ಸಾರಿ ಇದಕ್ಕೆ ಅರ್ಧದಷ್ಟು ದುಡ್ಡನ್ನಾದರೂ ಮಂಜೂರು ಮಾಡಬೇಕೆಂದು ತಮ್ಮ ಮುಖಾಂತರ ಕೇಳುತ್ತೇನೆ.

ಶ್ರೀ ಮೀರಾಜುದ್ದೀನ್ ಎನ್. ಪಟೇಲ್ : ಅಲ್ಲಿ ಇರುವಂಥ ನೌಕರರಿಗೆ ನಾವು ಸರ್ಕಾರದ ವತಿಯಿಂದ ಟ್ರಿಷರಿ ಮುಖಾಂತರ ಕೊಡುತ್ತಿದ್ದೇವೆ. ನಾವು ಏನು ಗ್ರಾಂಟ್ ಕೊಡುತ್ತೇವೆ, ಅದರ ಬಜೆಟ್‌ನಲ್ಲಿ ತಾವು ಪ್ರಾವಿಷನ್ ಮಾಡಿಕೊಂಡು, ಅವಕಾಶ ಮಾಡಿಕೊಂಡು, ಅದರಿಂದ ಈ ಕೆಲಸ ಮಾಡಿ. ಅದಕ್ಕಾಗಿ ಸಪರೇಟ್‌ಆಗಿ ಬಜೆಟ್ ಕೊಡಬೇಕು ಎನ್ನುವುದು ಸರ್ಕಾರದ ಬಜೆಟ್‌ನಲ್ಲಿ ಇಲ್ಲ.

ಶ್ರೀ ಹೆಚ್. ಸಿ. ಬಾಲಕೃಷ್ಣ : ನಾನು ಹೇಳತಕ್ಕಂಥಾದ್ದು ಏನೆಂದರೆ, ನಾವು ಸಂಪೂರ್ಣವಾಗಿ ಹೊರೆಯನ್ನು ನಿಮ್ಮ ಮೇಲೆ ಹಾಕುವುದಿಲ್ಲ. ನೀವು ಸ್ವಲ್ಪ ಹಣವನ್ನು ಸರ್ಕಾರದ ವತಿಯಿಂದ ಮಂಜೂರು ಮಾಡಿದರೆ, ಅಲ್ಲಿ ಕೂಡ ಹೊಂದಿಸಿಕೊಂಡು ಮಾಡುತ್ತೇವೆ. ಅಲ್ಲಿ ನಾವು 15 ಲಕ್ಷ ಹಾಕಬೇಕಾದರೆ, ಒಂದು ವರ್ಷ ಪೂರ್ತಿ ಕಾಯಬೇಕಾಗುತ್ತದೆ. ದಯಮಾಡಿ ನೀವು ಸರ್ಕಾರದ ವತಿಯಿಂದ ಹಣವನ್ನು ಮಂಜೂರು ಮಾಡಿದರೆ, ಅಲ್ಲಿರತಕ್ಕಂಥ ಹಣಕಾಸಿನ ಪರಿಸ್ಥಿತಿಯನ್ನು ನೋಡಿಕೊಂಡು ಅದರಿಂದಲೂ ಕೂಡ ನಾವು ಅನುಕೂಲ ಮಾಡಿ ಕೊಡುತ್ತೇವೆ. ದಯಮಾಡಿ ಮಂತ್ರಿಗಳು ಇದಕ್ಕೆ ಸರಿಯಾದ ಉತ್ತರವನ್ನು ಕೊಡಬೇಕು ಎಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

ಶ್ರೀ ಮೀರಾಜುದ್ದೀನ್ ಎನ್. ಪಟೇಲ್: ಮಾನ್ಯ ಅಧ್ಯಕ್ಷರೇ, ಸರ್ಕಾರದಿಂದ ಯಾವ ಯಾವ ಆಕ್ಟ್ಯಾಯ್‌ಗಳು, ಮೋಟಾರ್ ವೆಹಿಕಲ್ ಟ್ಯಾಕ್ಸ್, ಎಂಟರ್‌ಟೈನ್‌ಮೆಂಟ್ ಟ್ಯಾಕ್ಸ್ ಹೀಗೆ ಯಾವ ಯಾವುದನ್ನು ಕೊಡುವುದಿದೆ, ಅದನ್ನು ನಾವು ಸರಿಯಾಗಿ ಪ್ರತಿತಿಂಗಳೂ ಕೊಡುತ್ತಿದ್ದೇವೆ. ಆ ದುಡ್ಡಿನಲ್ಲಿ ನೀವು ನಿಮ್ಮ ಬಜೆಟ್‌ನಲ್ಲಿ ಪ್ರಾವಿಷನ್ ಮಾಡಿ, ಆ ಪ್ರೊಪೋಸಲ್‌ಅನ್ನು ಸರ್ಕಾರಕ್ಕೆ ಕಳುಹಿಸಿದರೆ ನಾವು ಬರೀ ಅಪ್ರೂವಲ್ ಮಾಡಿಕೊಡುತ್ತೇವೆ. ಆದರೆ ಅದರ ಸಲುವಾಗಿ ಸೆಪರೇಟ್‌ಆಗಿ ಹಣ ಕೊಡಲು ಯಾವುದೇ ಫಂಡ್ ನಮ್ಮ ಹತ್ತಿರ ಇಲ್ಲ.

ಶ್ರೀ ಹೆಚ್. ಸಿ. ಬಾಲಕೃಷ್ಣ : ನೀವು ಬಿಲ್ಡಿಂಗ್ ಕಟ್ಟುವುದಕ್ಕೆ ಇದುವರೆಗೂ ಎಲ್ಲಾ ಕೊಟ್ಟಿಲ್ಲವೇ? ಯಾವುದೇ ತಾಲ್ಲೂಕಿನಲ್ಲಿ ಕೊಟ್ಟಿಲ್ಲವೇ ಎನ್ನುವುದನ್ನು ದಯಮಾಡಿ ಮಂತ್ರಿಗಳು ಹೇಳಬೇಕು. ನಮಗೆ ಮಾತ್ರ ಕೊಡುವುದಿಲ್ಲವೋ ಅಥವಾ ಎಲ್ಲೂ ಕೊಡುವುದಿಲ್ಲವೋ, ಅದನ್ನು ಕೊಡತಕ್ಕಂಥ ಪ್ರಾವಿಷನ್ ಸರ್ಕಾರದ ಮುಂದೆ ಇಲ್ಲವೇ?

ಶ್ರೀ ಮೀರಾಜುದ್ದೀನ್ ಎನ್. ಪಟೇಲ್ : ಬಿಲ್ಡಿಂಗ್ ಕಟ್ಟುವ ಸಲುವಾಗಿ ನಾವು ಯಾವ ಮುನಿಸಿಪಾಲಿಟಿಗೂ ಕೊಟ್ಟಿಲ್ಲ. ಡೆವಲಪ್‌ಮೆಂಟ್ ಫಂಡ್ ಎಂದು ಕೊಟ್ಟಿದ್ದೇವೆ.

MR. SPEAKER : Alright. That is not the policy of the Government.